# ಸುಲೇಪೇಟೆ ಶ್ರೀಗಳ ಅಂತ್ಯಸಂಸ್ಕಾರ ಸುದ್ದಿ ಮತ್ತು ಫೋಟೋಗಳು

ಚಿತ್ರದುರ್ಗ, ಜು. 15 - ಚಿತ್ರದುರ್ಗ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಶಾಖಾಮಠವಾದ ಸುಲೇಪೇಟೆಯ ಖಟುವಾಂಗೇಶ್ವರ ವಿರಕ್ತಮಠದ ಆವರಣದಲ್ಲಿ ಲಿಂಗೈಕ್ಯ ಶ್ರೀ ಗುರುಲಿಂಗ ಸ್ವಾಮಿಗಳ ಅಂತ್ಯಸಂಸ್ಕಾರವು ಬಸವತತ್ತ್ವದ ವಿಧಿವಿಧಾನಗಳ ಪ್ರಕಾರ ಡಾ. ಶಿವಮೂರ್ತಿ ಮುರುಘಾ ಶರಣರ ನೇತೃತ್ವದಲ್ಲಿ ಜಂಗಮಪಾದಪೂಜೆ, ಸಮಾಧಿಪೂಜೆ, ಬಸವಜಲ ಸಿಂಪಡಣೆ, ವಿಭೂತಿಧಾರಣೆ, ಲಿಂಗಶರೀರದ ಪೂಜೆ, ವಚನ ಪಠಣ, ಪುಷ್ಪವೃಷ್ಟಿಯೊಂದಿಗೆ ನೆರವೇರಿತು.

ಶ್ರೀ ವೀರಭದ್ರ ಶಿವಾಚಾರ್ಯರು, ಗುರುಮಠಕಲ್‌ನ ಖಾಸಾ ಮುರುಘಾಮಠದ ಶ್ರೀ ಶಾಂತವೀರ ಸ್ವಾಮಿಗಳು, ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮಿಗಳು, ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು, ಹಾವೇರಿ ವಿರಕ್ತಮಠದ ಶ್ರೀ ಬಸವ ಶಾಂತಲಿಂಗ ಸ್ವಾಮಿಗಳು, ಶ್ರೀ ಗುರುನಂಜೇಶ್ವರ ಸ್ವಾಮಿಗಳು, ಶ್ರೀ ಹಿರೇ ಸದಾಶಿವ ಸ್ವಾಮಿಗಳು ಸೇರಿದಂತೆ 50ಕ್ಕು ಹೆಚ್ಚು ಸ್ವಾಮಿಗಳು, ಸುಲೇಪೇಟೆಯ ಗಣ್ಯರಾದ ಬಸವರಾಜ ಸಜ್ಜನ, ದಯಾನಂದ ರೆಮ್ಮಣಿ, ಸುನಿಲ್ ಕೋರಿ, ರುದ್ರಕಟ್ಟಿ ಪಠಶೆಟ್ಟಿ, ನಾಗಶೆಟ್ಟಿ ಕೂಟಗಿ, ಮಹೇಶ ಚೀಮಳಿಗಿ, ಮಲ್ಲಿಕಾರ್ಜುನ ದೇಸಾಯಿ, ಜಯಂತ ಶೀಲವಂತ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ ಹಾಗು ಅಪಾರ ಭಕ್ತಸಮೂಹ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ಇದೇ ತಿಂಗಳು 25-7-20ರಂದು ರವಿವಾರ ಬೆಳಗ್ಗೆ 11 ಗಂಟೆಗೆ ಶ್ರೀ ಗುರುಲಿಂಗ ಸ್ವಾಮಿಗಳ ಸ್ಮರಣೋತ್ಸವ ಜರುಗಲಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.











